ಶ್ರೀ ಬಿ. ಎ. ಕಕ್ಕಲಾಯ.—ಭೂ ಮಂಜೂರಾತಿ ಸಲಹಾ ಸಮಿತಿಗಳು ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಜಮೀನನ್ನು ಬಹಳ ದಿವಸಗಳಿಂದ ಅಂದರೆ ಸುಮಾರು ಒಂದು ವರ್ಷದಿಂದ ತೀರ್ಮಾನ ಮಾಡಿ ಕೊಡದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗೋಮಾಳ ಭೂಮಿಯಲ್ಲಿ ಮಾಲ್ಕಿ ಇದ್ದು ಅದನ್ನು ಹಂಚಲು ವಿಧಾನವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಆದರೆ ಅರಣ್ಯ ಇಲಾಖೆಯ ಅಧಿಕಾರಿಗಳು ಅದನ್ನು ಅದಷ್ಟು ಬೇಗ ತೀರ್ಮಾನಮಾಡಬೇಕೆಂದು ಅದಕ್ಕೆ ಸಂಬಂಧಪಟ್ಟ ನಡವರಲ್ಲಿ ಮಾತನಾಡಿದ್ದೇನೆ. ಅಷ್ಟು ಬೇಗ ಅದನ್ನು ಕೊಡುವುದಕ್ಕೆ ಮತ್ತು ಮಾಲ್ಕಿ ನಿರ್ಧಾರ ಮಾಡುವುದಕ್ಕೆ ಪೆತೂಮ್ಮೆ ಅವರನ್ನು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಸದಸ್ಯರು ಕೆಲವು ಸಮಿತಿಗಳು ಕೆಲಸ ಮಾಡುತ್ತಿಲ್ಲವೆಂದು ತಿಳಿಸಿದ್ದಾರೆ. ಅದರ ಬಗ್ಗೆ ಒಂದು ಸರ್ಕ್ಯೂಲರ್ ಹೊರಡಿಸಿ ಅದಷ್ಟು ಜಾಗ್ರತೆ ಹಂಚಿಕೆಯಾಗಬೇಕೆಂದು ಸಮಿತಿಗಳಿಗೆ ನಿರ್ದೇಶನ ಕೊಡುತ್ತೇನೆ.

SRI ABDUL KHUDDUS ANWAR —In regard to unauthorised land cultivated in Shimoga and Bhadravathi, according to my survey is more than 15,000 acres in Bhadravathi and 20,000 acres in Shimoga Taluks. Will the Government kindly regularise this and get more revenue to the Government ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಇದಕ್ಕೆ ಒಂದು ಕಾಲಮಿತಿ ಇದೆ. ಅದು ಮಿಗನೇ ಡಿಸೆಂಬರ್ ೧೯೭೫. ಅದಕ್ಕೆ ಮುಂಚೆ ಅಕ್ರಮ ಸ್ವಾಧೀನ ಮಾಡಿಕೊಂಡು ಅನುಭವಿಸುತ್ತಿದ್ದು ಅದನ್ನು ಕ್ರಮ ಗೊಳಿಸಬೇಕೆಂದು ಅರ್ಜಿ ಹಾಕಿದ್ದರೆ ಅಂಥವುಗಳನ್ನು ಲೆಕ್ಕಕ್ಕೆ ತೆಗೆದ ಕೊಳ್ಳಬೇಕು ಮತ್ತೆ ಅದರ ಈಚೆಗೆ ಅಕ್ರಮ ಸ್ವಾಧೀನ ಮಾಡಿಕೊಂಡು ಅದನ್ನು ತಿಳಿಸದೆ ಇದ್ದರೆ ಅಂಥವುಗಳನ್ನು ಕನ್ವಿಡರ್ ಮಾಡಕೂಡದೆಂದು ತಿಳಿಸಿದ್ದೇವೆ. ಒಂದೆರಡಲ್ಲಿ ಅಂಥವುಗಳು ಏನಾದರೂ ಇದ್ದರೆ ಸರ್ಕಾರದ ಗಮನಕ್ಕೆ ತರಬೇಕು ಎಂದು ಮಾನ್ಯ ಸದಸ್ಯರನ್ನು ಕೇಳುತ್ತೇನೆ. ಒಂದೇ ಸಮನೆ ಅಕ್ರಮ ಸ್ವಾಧೀನ ಮಾಡಿಕೊಂಡು ಹೋಗುವುದಾರೆ ಅದಕ್ಕೆ ಒಂದು ತಡೆ ಹಾಕಬೇಕು. ಇದಕ್ಕೆ ಒಂದು ಕಾಲಮಿತಿ ಗೊತ್ತು ಮಾಡಿದ್ದೇವೆ. ಇದಕ್ಕೆ ಕಾರಣ ಅಕ್ರಮ ಸ್ವಾಧೀನ ಮಾಡಿಕೊಂಡಿರುವವರ ಹೆಸರಿಗೆ ಕನ್ ಫರ್ಮ್ ಮಾಡುವುದಾದರೆ ನಿಮ್ಮವರ್ಗಕ್ಕೆ ಸೇರದ ಬೇರಷ್ಟು ಜಮೀನನ್ನು ಕೊಡುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ೧೯೭೫ರ ಜನವರಿ ಈಚೆಗೆ ಅರ್ಜಿಗಳು ಬಂದರೂ ಕೂಡ ಅದನ್ನು ಪರಿಶೀಲನೆಗೆ ತೆಗೆದುಕೊಳ್ಳದೆ ಅವರ ಮೇಲೆ ಸೂಕ್ತ ಕ್ರಮತೆಗೆದುಕೊಳ್ಳಬೇಕೆಂದು ಸರ್ಕಾರದ ಮುಂದೆ ಬಂದಿದೆ.

Re-organisation of Police Department

566 SRI K. R. SRINIVASULU NAYUDU (Shanthinagar)—Will the Chief Minister be pleased to state :—

(a) whether it has come to the notice of the Government that the Police force in the State is insufficient when compared with the size and population of the State ;

(b) if so, the steps taken to re-organise the Department of Police ?

SRI D. DEVABAJ URS (Chief Minister). —

(a) By and large, the existing Police force in the State is adequate to deal with normal situations, though there is scope for re-organisation.

(b) Some re-organisation proposals which have been received are under consideration.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಸ್ವಾಮಿ ತಮ್ಮ ಉತ್ತರದಿಂದ ಸಾಕಾದಷ್ಟು ಅವಕಾಶ ಇದೆ ಎಂದು ತಾವು ಒಪ್ಪಿಕೊಂಡಿದ್ದೀರಿ ? ಹೋದವರ್ಷ ರಿಪೋರ್ಟ್ ಆಫ್ ಕ್ರೈಮ್ಸ್ ಹೆಚ್ಚಾಗಿವೆಯೆಂದು ಗೊತ್ತಾಗುತ್ತದೆ. ಜೊತೆಗೆ ರಾಜ್ಯದ ಜನಸಂಖ್ಯೆಯು ಗಾತ್ರ ವಿಸ್ತಾರವಾಗಿದೆ; ಅದರಿಂದ ವಿದ್ಯಾರ್ಥಿ, ಕಾರ್ಮಿಕರ ಮತ್ತು ಇನ್ನು ಇತರ ಮುಷ್ಕರಗಳಲ್ಲಿ ಆಗಿರುವ ತೊಂದರೆಯನ್ನು ತಡೆಗಟ್ಟಲು ಈಗಿರತಕ್ಕ ಸಿಬ್ಬಂದಿ ಇನ್ ಅಡೆಕ್ವೇಟ್ ಪೋರ್ಸ್ ಎಂದು ಮತ್ತೆ ಇವನ್ನು ಪುನರ್‌ವಿಂಗಡಣೆ ಮಾಡುವ ನೀತಿ ನಿಯಮ ಇದೆಯೆಂದು ಹೇಳಿದ್ದೀರಿ. ಆದ್ದರಿಂದ ಇದರ ಬಗ್ಗೆ ತಮ್ಮ ಇಲಾಖೆಯು ನೀತಿ ನಿಯಮ ಏನು ಎಂದು ತಿಳಿಸುತ್ತೀರಾ?

†ಶ್ರೀ ಡಿ. ದೇವರಾಜ್ ಅರಸ್.—ಈಗ ಇರುವ ಸ್ಟೆಂತ್‌ನಿಂದಲೇ ಮ್ಯಾನೇಜ್ ಮಾಡಿಕೊಂಡು ಹೋಗುತ್ತಿದ್ದೇವೆ. ರೀ ಆರ್ಗನೈಸ್ ಮಾಡುವಾಗ ಇದನ್ನು ಇನ್‌ಕ್ರೀಸ್ ಮಾಡುವುದು ಅಗತ್ಯ ಎನ್ನುವುದು ಸರ್ಕಾರದ ಮನಸ್ಸಿಗೆ ಬಂದಿದೆ. ಈ ಕಾರಣದಿಂದ ನಾನಾ ಜಿಲ್ಲೆಗಳಲ್ಲಿ ಯಾವ ಯಾವ ರೀತಿ ರೀ ಆರ್ಗನೈಸ್ ಮಾಡಬೇಕು ಎಂದು ಕೇಳಿದ್ದೇವೆ. ಅವಕ್ಕೆ ಕೆಲವು ಜಿಲ್ಲೆಗಳಿಂದ ವಿವರಗಳು ಬಂದಿವೆ. ಇನ್ನು ಬರುವುದು ಇದೆ. ಎದು ಎಲ್ಲಕ್ಕೂ ಎಂದು ಎಸ್ಟಿಮೇಟ್ ಮಾಡಿದ್ದಾರೆ ಅದರ ಸ್ವರೂಪ ೩ ಕೋಟಿ ರೂಪಾಯಿಗಳವರೆಗೆ ಹೆಚ್ಚಿಗೆ ಕರ್ಚುಮಾಡಬೇಕಾಗುತ್ತದೆ ಇದು ಸರ್ಕಾರದ ಮುಂದಿದೆ. ಇದನ್ನು ಒಂದೇ ಹಂತದಲ್ಲಿ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಹಣಕಾಸಿನ ಅಭಾವ ಇರುತ್ತದೆ ಆದ್ದರಿಂದ ಇದನ್ನು ಹಂತ ಹಂತವಾಗಿ ಜಾರಿಗೆ ತರುವುದು ಸರ್ಕಾರದ ಅಭಿಪ್ರಾಯ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯುಡು.—ಹಿಂದೆ ಹಳೆಯ ಮೈಸೂರಿನಲ್ಲಿ ಹ್ಯಾಮ್ಲೆಟ್ ಸ್ಕೀಂ ಎಂದು ಇತ್ತು, ಅದರ ಪ್ರಕಾರ ಹತ್ತುಸಾವಿರ ಜನಸಂಖ್ಯೆ ಇದ್ದರೆ ಅದಕ್ಕೆ ತಕ್ಕಂತೆ ಪೋಲೀಸ್ ಸಿಬ್ಬಂದಿ ಇರಬೇಕು ಎಂದು ಇತ್ತು. ತಾವು ಇದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಇವೆಲ್ಲವೂ ಸರ್ಕಾರದ ಮುಂದೆ ಇದೆ. ಆದ್ದರಿಂದ ರಿಸರ್ವ್ ಪೋಲೀಸ್ ಸಿವಿಲ್ ಪೋಲೀಸ್ ಸ್ಟ್ರೆಂಗ್ತನ್ನು ಎಲ್ಲೆಲ್ಲಿ ಹೆಚ್ಚಿಸಬೇಕು ಎನ್ನುವುದನ್ನು ಪರಿಶೀಲನೆ ಮಾಡಿ ಸರ್ಕಾರದ ಮುಂದೆ ಶಿಫಾರಸ್‌ಗಳು ಇವೆಯೆಂದು ಹೇಳಿದ್ದೆವು.

ಶ್ರೀ ಎ. ಎಂ. ಸೂರ್ಯನಾರಾಯಣಗಾಡ.—ಪಟ್ಟಣಗಳಲ್ಲಿ ಅದರಲ್ಲಿಯೂ ಕೈಗಾರಿಕೆಗಳ ಸುತ್ತ ಮುತ್ತ ಇರುವ ಕಡೆ ೨೦ ವರ್ಷಗಳ ಹಿಂದೆ ಎಷ್ಟು ಪೋಲೀಸ್ ಸಂಖ್ಯೆ ಇತ್ತೊ ಅಷ್ಟೇ ಈಗಲೂ ಇದೆ. ಅಲ್ಲಿ ಪೊಲೀಸ್ ಸಿಬ್ಬಂದಿಯ ಅವಶ್ಯಕತೆ ಅತ್ಯಾವಶ್ಯಕವಾಗಿದೆ, ಆದ್ದರಿಂದ ಇವರ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಡಿ. ದೇವರಾಜ್ ಅರಸ್.—ಐಡಿಯರ್ ಪೊಜಿಷನ್ ಅನ್ನು ನಾವು ಆಚೇನ್ ಮಾಡಬೇಕು ಎಂದು ಸರ್ಕಾರದ ಅಭಿಪ್ರಾಯ. ಆದರೂ ಸಹ ಹಣದ ಅಭಾವ ಇರುವುದರಿಂದ ಒಂದೇ ಸಾರಿ ಆ ಮಟ್ಟಕ್ಕೆ ಮುಟ್ಟುವುದು ಕಷ್ಟವಾಗುತ್ತದೆ. ಅದೇರೀತಿಯಾಗಿ ನಾವು ಪರಿಯಾಮ್ಲೆಸ್ ವಾಪ್ಯುಲೇಷನ್ ಮೈಸೂರ್ ಪೋಲೀಸ್ ಪರ್ಸೆಂಟೇಜ್ ಜಾಸ್ತಿಮಾಡಬೇಕು ಎಂದು ನೋಡಿದಾಗ ನಮ್ಮದು ಆಂಧ್ರಪ್ರದೇಶಕ್ಕಿಂತ ಉತ್ತಮವಾಗಿದೆ. ಬೇರೆ ಕಡೆಗಿಂತ ಸ್ವಲ್ಪ ಕಡಿಮೆ ಇದೆ. ಇದನ್ನು ರೀ—ಆರ್ಗನೈಸ್ ಮಾಡಬೇಕು ಎಂದು ಪ್ರಪೋಸರ್ ಸರ್ಕಾರದ ಮುಂದೆ ಇದೆ.

ಶ್ರೀ ಕೊಣಂದೂರು ಲಿಂಗಪ್ಪ.—ಪೋಲೀಸ್ ಇಲಾಖೆಯಲ್ಲಿ ಪೋಲೀಸ್ ಹೆಚ್ಚು ಮಾಡುವುದು ಅಷ್ಟು ಯೋಗ್ಯವಾದಂಥ ಸುಸಂಸ್ಕೃತವಾದಂಥ ವಿಚಾರವಲ್ಲ ಎನ್ನುವುದನ್ನು ಒಪ್ಪುತ್ತೀರಾ ? ನಮ್ಮ ಜನ ಒಳ್ಳೆಯವರು, ಪೋಲೀಸ್ ಕಡಿಮೆ ಇದ್ದರೆ ಸಾಕು.

ಶ್ರೀ ಡಿ. ದೇವರಾಜ ಅರಸ್.—ಜನ ಒಳ್ಳೆಯವರು ಸುಸಂಸ್ಕೃತಿಯುಳ್ಳವರು, ಪೋಲೀಸ್ ಇಲ್ಲದಂತೆ ಮಾಡಿದರೆ ಒಳ್ಳೆಯದು ಎಂದು ತಾವು ಒಪ್ಪುತ್ತೀರಾ